**D** SL. No. : H

ಒಟ್ಟು ಪ್ರಶ್ನೆಗಳ ಸಂಖ್ಯೆ : 31 + 31 ]

Total No. of Questions : 31 + 31 ]

**CCE PR**

**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 98-K**

**Code No. : 98-K**

# ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : CARNATIC MUSIC / HINDUSTANI MUSIC — THEORY

**(ಕನ್ನಡ ಭಾಷಾಂತರ / Kannada Version)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)**

ದಿನಾಂಕ : 24. 06. 2019 ]

[ Date : 24. 06. 2019

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ]

[ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 50 ]

[ Max. Marks : 50

### ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು 31 + 31 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here



https://www.karnatakaboard.com/

# (ಕರ್ನಾಟಕ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಭಾರತೀಯ ಪುರಾತನ ಗ್ರಂಥಗಳಲ್ಲಿ ಕಲೆಗಳ ಸಂಖ್ಯೆ

   (A) 33 (B) 64

   (C) 108 (D) 80

2. ಎರಡು ಪದ್ಧತಿಗಳಲ್ಲೂ ತಂಬೂರಿಯು

   (A) ಘನ ವಾದ್ಯವಾಗಿದೆ (B) ಅವನದ್ಧ ವಾದ್ಯವಾಗಿದೆ

   (C) ಶೃತಿ ವಾದ್ಯವಾಗಿದೆ (D) ಸುಷಿರ ವಾದ್ಯವಾಗಿದೆ

3. ಇಂದು ಬಳಕೆಯಲ್ಲಿಲ್ಲದ ದೇವಗಾನ ಅದು

   (A) ದೇಶೀ ಸಂಗೀತ (B) ಸುಗಮ ಸಂಗೀತ

   (C) ಪಾಶ್ಚಾತ್ಯ ಸಂಗೀತ (D) ಮಾರ್ಗ ಸಂಗೀತ

4. ರಂಜಿಸುವ ಸ್ವರಗಳ ಸಮೂಹವೇ,

   (A) ಭಾಷಾಂಗ ರಾಗ (B) ಜನ್ಯ ರಾಗ

   (C) ರಾಗ (D) ಜನಕರಾಗ

5. ಈ ಕೆಳಗಿನ ತಾಳಗಳಲ್ಲಿ ಸುಳಾದಿ ಸಪ್ತತಾಳಗಳಲ್ಲಿ ಒಂದು ತಾಳ

   (A) ಆದಿತಾಳ (B) ರೂಪಕತಾಳ

   (C) ಛಾಪುತಾಳ (D) ಝಂಪ್ತಾಳ

6. ಪ್ರತಿಯೊಂದು ಸ್ವರವೂ ಪುನರಾವರ್ತನೆಯಾಗಿ ಬರುವ ರಚನೆಯುಳ್ಳ ಸ್ವರಾವಳಿ

   (A) ಸರಳೆ ವರಸೆ (B) ದಾಟು ವರಸೆ

   (C) ಜಂಟಿ ವರಸೆ (D) ತಾರಸ್ಥಾಯಿ ವರಸೆ

7. ತಿಶ್ರಜಾತಿ ತ್ರಿಪುಟತಾಳದ ಒಂದು ಆವರ್ತಕ್ಕೆ 7 ಅಕ್ಷರಗಳು ಬರುತ್ತವೆ. ಏಕೆಂದರೆ,

   (A) ಲಘುವಿನಲ್ಲಿ 3 ಅಕ್ಷರಗಳಿರುತ್ತವೆ (B) ಲಘುವಿನಲ್ಲಿ 4 ಅಕ್ಷರಗಳಿರುತ್ತವೆ

   (C) ಲಘುವಿನಲ್ಲಿ 5 ಅಕ್ಷರಗಳಿರುತ್ತವೆ (D) ಲಘುವಿನಲ್ಲಿ 7 ಅಕ್ಷರಗಳಿರುತ್ತವೆ



https://www.karnatakaboard.com/

8. ಹಿಂದೋಳ ರಾಗವನ್ನು ಔಡವರಾಗವೆನ್ನುವರು. ಏಕೆಂದರೆ,

(A) ಆರೋಹಣ, ಅವರೋಹಣದಲ್ಲಿ 6 ಸ್ವರಗಳಿರುತ್ತವೆ

(B) ಆರೋಹಣ, ಅವರೋಹಣದಲ್ಲಿ 5 ಸ್ವರಗಳಿರುತ್ತವೆ

(C) ಆರೋಹಣ, ಅವರೋಹಣದಲ್ಲಿ 4 ಸ್ವರಗಳಿರುತ್ತವೆ

(D) ಆರೋಹಣ, ಅವರೋಹಣದಲ್ಲಿ 7 ಸ್ವರಗಳಿರುತ್ತವೆ

9. ರಿ, ಗ, ಮ, ದ, ನಿ ವಿಕೃತಿಸ್ವರಗಳು. ಏಕೆಂದರೆ ಅವು

(A) ಬದಲಾವಣೆ ಹೊಂದುವುದಿಲ್ಲ (B) ಬದಲಾವಣೆ ಹೊಂದುತ್ತವೆ

(C) ಸ್ಥಿರವಾಗಿರುತ್ತದೆ (D) ಚಲಿಸುವುದಿಲ್ಲ

10. ನಾಗಸ್ವರವು ಸುಷಿರವಾದ್ಯ. ಕಾರಣ

(A) ಇದು ಉದ್ದನೆಯ ವಾದ್ಯ (B) ಇದು ಮಂಗಳಕರ ವಾದ್ಯ

(C) ಇದು ಗಾಳಿಯಿಂದ ನಾದ ಬರುವ ವಾದ್ಯ (D) ಇದು ಪುರಾತನ ವಾದ್ಯ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $10 \times 1 = 10$

11. ಷಾಡವ ರಾಗಕ್ಕೂ, ಔಡವರಾಗಕ್ಕೂ ಇರುವ ಒಂದು ವ್ಯತ್ಯಾಸ ಬರೆಯಿರಿ.

12. ಆಧಾರ ಶೃತಿ ಎಂದರೇನು ?

13. ತಾರಸ್ಥಾಯಿಯನ್ನು ಬರವಣಿಗೆಯಲ್ಲಿ ಹೇಗೆ ಸೂಚಿಸುತ್ತಾರೆ ?

14. ವಕ್ರರಾಗ ಎಂದರೇನು ?

15. ಕೃತಿ ಮತ್ತು ಕೀರ್ತನೆಗಿರುವ ಒಂದು ವ್ಯತ್ಯಾಸವನ್ನು ತಿಳಿಸಿ.

16. ಕನಕದಾಸರ ಮೊದಲ ಹೆಸರೇನು ?

17. ತೃತೀಯ ಕಾಲವನ್ನು ಬರವಣಿಗೆಯಲ್ಲಿ ಹೇಗೆ ಸೂಚಿಸುತ್ತಾರೆ ?

18. ಸ್ವರಾವಳಿ ಎಂದರೇನು ?

19. ಕರ್ನಾಟಕ ಸಂಗೀತಕ್ಕೂ, ಹಿಂದೂಸ್ಥಾನಿ ಸಂಗೀತಕ್ಕೂ ಇರುವ ಒಂದು ಸಾಮ್ಯತೆಯನ್ನು ತಿಳಿಸಿ.

20. ಘನವಾದ್ಯ ಎಂದರೇನು ?



https://www.karnatakaboard.com/

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $9 \times 2 = 18$

21. ಸಂಚಾರಿ ಗೀತೆಗೂ, ಲಕ್ಷಣಗೀತೆಗೂ ಇರುವ ವ್ಯತ್ಯಾಸವನ್ನು ತಿಳಿಸಿ.

22. ಈ ಕೆಳಗಿನ ವಾದ್ಯಗಳನ್ನು ತತ ವಾದ್ಯ, ಸುಷಿರ ವಾದ್ಯಗಳನ್ನಾಗಿ ವಿಂಗಡಿಸಿ ಬರೆಯಿರಿ :

    (i) ಕ್ಲಾರಿಯೋನೆಟ್ (ii) ವೀಣೆ

    (iii) ಗೋಟುವಾದ್ಯ (iv) ಹಾರ್ಮೋನಿಯಂ

    (v) ಪಿಟೀಲು (vi) ನಾಗಸ್ವರ

23. ಗಣಿತಶಾಸ್ತ್ರವು ಸಂಗೀತಕ್ಕೆ ಹೇಗೆ ಸಂಬಂಧಿಸಿದೆ ?

24. ಕರ್ನಾಟಕ ಹಾಗೂ ಹಿಂದೂಸ್ಥಾನಿ ಪದ್ಧತಿಗಳಲ್ಲಿ ಬರುವ ಈ ಸಮಾನ ರಾಗಗಳನ್ನು ವಿಂಗಡಿಸಿ ಬರೆಯಿರಿ.

    ಮೋಹನ, ಭೀಮ್ ಪಲಾಸ್, ಭೂಪ್, ಅಭೇರಿ

25. ಅಕ್ಕಮಹಾದೇವಿಯು ಸಂಸಾರ ತ್ಯಜಿಸಿ ವಿರಾಗಿಯಾಗಲು ಕಾರಣವೇನು ?

26. ಕೊಳಲನ್ನು ಸುಷಿರ ವಾದ್ಯವೆಂದು ಕರೆಯಲು ಕಾರಣವೇನು ?

27. ಈ ಕೆಳಗಿನ ರಾಗಗಳನ್ನು ಉಪಾಂಗ ಹಾಗೂ ಭಾಷಾಂಗ ರಾಗಗಳಾಗಿ ವಿಂಗಡಿಸಿ ಬರೆಯಿರಿ :

    (i) ಬಿಲಹರಿ (ii) ಹಂಸಧ್ವನಿ

    (iii) ಶ್ರೀರಾಗ (iv) ಕಾಂಭೋಜಿ

28. ಅಭ್ಯಾಸ ಗಾನ ರಚನೆಗಳು ಮತ್ತು ಸಭಾಗಾನ ರಚನೆಗಳಲ್ಲಿರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.

29. ಕಲ್ಯಾಣಿ ಮತ್ತು ಶಂಕರಾಭರಣ ರಾಗಗಳ ನಡುವೆ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

30. ತಿಶ್ರ ಜಾತಿ ತ್ರಿಪುಟ ತಾಳದ ಅಲಂಕಾರವನ್ನು ಸ್ವರವಿನ್ಯಾಸಗೊಳಿಸಿ ಬರೆಯಿರಿ. 5

31. ಸಪ್ತತಾಳಗಳನ್ನು ಅವುಗಳ ತಾಳಾಂಗ ಮತ್ತು ಚಿಹ್ನೆಗಳೊಂದಿಗೆ ವಿಂಗಡಿಸಿ ಬರೆಯಿರಿ. 7



https://www.karnatakaboard.com/

## (ಹಿಂದೂಸ್ಥಾನಿ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ದಕ್ಷಿಣಾದಿ ಸಂಗೀತ ಎಂದರೆ

   (A) ಉತ್ತರಾದಿ ಸಂಗೀತ (B) ಔತ್ತರೇಯ ಸಂಗೀತ

   (C) ಕರ್ನಾಟಕ ಸಂಗೀತ (D) ಹಿಂದೂಸ್ಥಾನಿ ಸಂಗೀತ

2. ಛೋಟಾಖ್ಯಾಲ್ ಎರಡನೇ ಭಾಗವನ್ನು ಅಂತರಾ ಎಂದು ಕರೆಯಲಾಗಿದೆ. ಏಕೆಂದರೆ

   (A) ಅದನ್ನು ತಾರಷಡ್ಜ ಮತ್ತು ಅದರ ಮೇಲಿನ ಭಾಗದಲ್ಲಿ ಹಾಡಲಾಗುತ್ತದೆ

   (B) ಅದನ್ನು ಮಧ್ಯ ಸಪ್ತಕದಲ್ಲಿ ಹಾಡಲಾಗುತ್ತದೆ

   (C) ಅದನ್ನು ಮಂದ್ರ ಸಪ್ತಕದಲ್ಲಿ ಹಾಡಲಾಗುತ್ತದೆ

   (D) ಅದು ಸ್ಥಾಯಿ ಭಾಗವಾಗಿರುತ್ತದೆ

3. ಪಂಡಿತ್ ವಿಷ್ಣು ನಾರಾಯಣ ಭಾತಖಂಡೆಯವರ ಸ್ವರಲಿಪಿ ಪದ್ಧತಿಯಲ್ಲಿ <u>ರಿ</u> <u>ಗ</u> <u>ಧ</u> <u>ನಿ</u> ಸ್ವರಗಳ ಕೆಳಗೆ ಅಡ್ಡಗೆರೆ ಕೊಡಲಾಗುವುದು ಏಕೆಂದರೆ

   (A) ಅವು ಕೋಮಲ ಸ್ವರಗಳು (B) ಅವು ಶುದ್ಧ ಸ್ವರಗಳು

   (C) ಅವು ತೀವ್ರ ಸ್ವರಗಳು (D) ಅವು ವರ್ಜ್ಯ ಸ್ವರಗಳು

4. ಪಂಡಿತ್ ಪಂಚಾಕ್ಷರಿ ಗವಾಯಿಗಳು ಉಭಯ ಗಾಯನಾಚಾರ್ಯರು ಏಕೆಂದರೆ

   (A) ಅವರು ಪ್ರಸಿದ್ಧ ಹಿಂದೂಸ್ಥಾನಿ ಗಾಯಕರು

   (B) ಅವರು ಕರ್ನಾಟಕ ಸಂಗೀತ ಗಾಯಕರು

   (C) ವಚನ ಸಂಗೀತದ ಗಾಯಕರು

   (D) ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತದ ಗಾಯಕರು

5. ತಾಳವನ್ನು ಲಯ ಪಿತಾ ಎಂದು ಕರೆಯಲಾಗಿದೆ ಏಕೆಂದರೆ

   (A) ತಾಳಕ್ಕೆ ತಂದೆಯ ಸ್ಥಾನವನ್ನು ನೀಡಲಾಗಿದೆ

   (B) ತಾಳಕ್ಕೆ ತಾಯಿಯ ಸ್ಥಾನವನ್ನು ನೀಡಲಾಗಿದೆ

   (C) ತಾಳವು ತಲು ಎಂಬ ಶಬ್ಧದಿಂದ ಬಂದಿದೆ

   (D) ತಾಳದಲ್ಲಿ ಪೆಟ್ಟು ಮತ್ತು ಹುಸಿಗಳಿವೆ



https://www.karnatakaboard.com/

6. ರಾಗದ ಅತಿ ಸೂಕ್ಷ್ಮ ಸ್ವರಗಳೇ

(A) ಕೋಮಲ ಸ್ವರಗಳು (B) ಮೀಂಡ್ ಸ್ವರಗಳು

(C) ಕಣ್ ಸ್ವರಗಳು (D) ವಿಕೃತ ಸ್ವರಗಳು

7. ಕರ್ನಾಟಕ 'ಶಾಸ್ತ್ರೀಯ ಸಂಗೀತದ ಪಿತಾಮಹ'

(A) ಕನಕದಾಸರು (B) ಪುರಂದರದಾಸರು

(C) ಗೋಪಾಲದಾಸರು (D) ಶ್ರೀಪಾದರಾಜರು

8. ತಂಬೂರಿಯು ಒಂದು

(A) ಪಕ್ಕ ವಾದ್ಯ (B) ಶೃತಿ ವಾದ್ಯ

(C) ಸ್ವತಂತ್ರ ವಾದ್ಯ (D) ಸ್ವತಂತ್ರ ವಾದ್ಯ ಮತ್ತು ಪಕ್ಕ ವಾದ್ಯ

9. ಈ ಕೆಳಗಿನವುಗಳಲ್ಲಿ ಹಿಂದೂಸಾನಿ ಸಂಗೀತ ರಾಗ ಎಂದರೆ

(A) ಪಟ್‌ದೀಪ್ (B) ಮೋಹನ

(C) ಸರಸಾಂಗಿ (D) ಚಲನಾಟ

10. ಬಸವಣ್ಣನವರ ಅಂಕಿತನಾಮ

(A) ಗುಹೇಶ್ವರಾ (B) ಚೆನ್ನಮಲ್ಲಿಕಾರ್ಜುನಾದೇವಾ

(C) ಆದಿಕೇಶವ (D) ಕೂಡಲಸಂಗಮದೇವಾ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $10 \times 1 = 10$

11. ಸಂಗೀತ ಎಂದರೇನು ?

12. ರಾಗದ ಲಕ್ಷಣಗಳನ್ನು ತಿಳಿಸುವ ಗೀತೆಗೆ ಏನೆಂದು ಕರೆಯುತ್ತಾರೆ ?

13. ನಿಮಗೆ ಗೊತ್ತಿರುವ ಇಬ್ಬರು ಹಿಂದೂಸ್ಥಾನಿ ಗಾಯಕರನ್ನು ಹೆಸರಿಸಿ.

14. ಹಿಂದೂಸ್ಥಾನಿ ಸಂಗೀತದಲ್ಲಿರುವ ಥಾಟ್ ರಾಗಗಳು ಎಷ್ಟು ?

15. ಭೈರವಿ ರಾಗವನ್ನು ಥಾಟ್ ರಾಗ ಎನ್ನುತ್ತಾರೆ ಏಕೆ ?

16. ಬಾನ್ಸುರಿ ವಾದ್ಯವನ್ನು ಸುಷಿರ ವಾದ್ಯವೆಂದು ಕರೆಯುತ್ತಾರೆ ಏಕೆ ?

17. ಪಂಡಿತ್ ವಿಷ್ಣುದಿಗಂಬರ ಫಲೂಸ್ಕರ್‌ರವರು ಕುರುಡರಾದುದೇಕೆ ?

18. ಪಂಡಿತ್ ವಿಷ್ಣುನಾರಾಯಣ ಭಾತಖಂಡೆಯವರ ಸ್ವರಲಿಪಿಯಲ್ಲಿ 'S' ಚಿಹ್ನೆಯನ್ನು ಏಕ ಬಳಸುತ್ತಾರೆ ?

19. ಸಂಗೀತವು ಶ್ರವಣ ಸಾಧನದ ವಿದ್ಯೆ ಏಕೆ ?

20. ಖಮಾಜ್ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಕಂಡುಬರುವ ವ್ಯತ್ಯಾಸವನ್ನು ತಿಳಿಸಿ.



https://www.karnatakaboard.com/

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $9 \times 2 = 18$

21. ಗಾಯನ ಸಮಯವನ್ನು ಉದಾಹರಣೆಯೊಂದಿಗೆ ವಿವರಿಸಿ.

22. ಖಮಾಜ್ ಮತ್ತು ತಿಲಂಗ್ ರಾಗಕ್ಕಿರುವ ಒಂದೊಂದು ಸಾಮ್ಯತೆ ಮತ್ತು ವ್ಯತ್ಯಾಸವನ್ನು ತಿಳಿಸಿ.

23. ಝಪ್ತಾಳದ ಠೇಕಾ ಬರೆಯಿರಿ.

24. ಗಾಯಕನಿಗೆ ಸ್ವರಾಲಂಕಾರಗಳ ಅವಶ್ಯಕತೆ ಇದೆ. ಏಕೆ ?

25. ಕರ್ನಾಟಕದಲ್ಲಿ ಎರಡು ಸಂಗೀತ ಪದ್ಧತಿಗಳು ಬೆಳೆದು ಬರಲು ಕಾರಣವೇನು ?

26. ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತಕ್ಕಿರುವ ಎರಡು ವ್ಯತ್ಯಾಸಗಳನ್ನು ತಿಳಿಸಿ.

27. ಈ ಕೆಳಗೆ ಕೆಲವು ತಾಳಗಳನ್ನು ಕೊಡಲಾಗಿದೆ. ಅವುಗಳನ್ನು ವಿಂಗಡಿಸಿ ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದ ತಾಳಗಳಾಗಿ ವರ್ಗೀಕರಿಸಿ.

    ಆದಿತಾಳ, ಆಟತಾಳ, ಝಪ್ತಾಳ, ಧ್ರುತ್ ಏಕತಾಳ, ತ್ರಿಶ್ರಜಾತಿ ತ್ರಿಪುಟತಾಳ, ದಾದರಾತಾಳ.

28. ಖಯಾಲ್ ಗಾಯನವು, ಧ್ರುಪದ್ ಗಾಯನ ಶೈಲಿಗಿಂತ ಭಿನ್ನವಾಗಿದೆ. ಹೇಗೆ ?

29. ಈ ಕೆಳಗೆ ಕೊಟ್ಟಿರುವ ಗೀತಾಪ್ರಕಾರಗಳಲ್ಲಿ ಹಿಂದೂಸ್ಥಾನಿ ಸಂಗೀತಕ್ಕೆ ಸಂಬಂಧಿಸಿದ್ದನ್ನು ವಿಂಗಡಿಸಿ ಬರೆಯಿರಿ :

    ಜತಿಸ್ವರ, ಪಿಳ್ಳಾರಿ ಗೀತೆ, ಧ್ರುಪದ್, ಖಯಾಲ್, ಕೀರ್ತನೆ, ಕೃತಿ, ತಿಲ್ಲಾನ, ಧಮಾರ್, ಠುಮ್ರಿ, ಜಾವಳಿ, ತರಾನ, ಪದ, ಟಪ್ಪ, ಘಜಲ್, ಭಜನ್.

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

30. ನಿಮ್ಮ ಪಠ್ಯದಲ್ಲಿರುವ ಯಾವುದಾದರೂ ಸ್ವರಗೀತೆಯನ್ನು ಸ್ವರಲಿಪಿಬದ್ಧಗೊಳಿಸಿ : 5

31. ಸಂಗೀತ ವಾದ್ಯಗಳ ವರ್ಗೀಕರಣವನ್ನು ಉದಾಹರಣೆಗಳೊಂದಿಗೆ ವಿವರಿಸಿ. 7



https://www.karnatakaboard.com/

https://www.karnatakaboard.com/